(ಸದನ ಪ್ರಾರಂಭವಾದಾಗ ವಿರೋಧ ಪಕ್ಷವಾದ ಭಾರತೀಯ ಜನತಾ ಪಕ್ಷದ ಸದಸ್ಯರು ಸದನದ ಭಾವಿಯಲ್ಲಿ ಧರಣಿಯಲ್ಲಿದ್ದರು)

ಅಧ್ಯಕ್ಷರು : ಮೊದಲಿಗೆ, ಹುಟ್ಟುಹಬ್ಬದ ಶುಭಾಶಯಗಳು. ಈ ದಿನ ದಿನಾಂಕ: 24–06–2014ರಂದು ಹುಟ್ಟುಹಬ್ಬವನ್ನು ಆಚರಿಸಿಕೊಳ್ಳುತ್ತಿರುವ ಸದನದ ಸದಸ್ಯರಾಗಿರುವ ಶ್ರೀ ವೈ.ಎಸ್.ವಿ.ದತ್ತ ಇವರಿಗೆ ಜನ್ಮ ದಿನದ ಶುಭಾಶಯಗಳು. ಈ ಸಂದರ್ಭದಲ್ಲಿ ಭಗವಂತನು ತಮಗೆ ಆಯುರಾರೋಗ್ಯ ಐಶ್ವರ್ಯಗಳನ್ನು ದಯಪಾಲಿಸಲಿ ಎಂದು ಹಾರೈಸುತ್ತೇನೆ.

1. ನಿಯಮ 69ರ ಮೇರೆಗೆ ಮುಂದುವರಿದ ಚರ್ಚೆ

ವಿಷಯ: ಕಬ್ಬು ಬೆಳೆಗಾರರ ಸಮಸ್ಯೆ

ಶ್ರೀ ಜಗದೀಶ ಶೆಟ್ಟರ್ (ವಿರೋಧ ಪಕ್ಷದ ನಾಯಕರು) (ತಮ್ಮ ಸ್ಥಾನದಿಂದ): ಸನ್ಮಾನ್ಯ ಅಧ್ಯಕ್ಷರೆ, ನಿನ್ನೆಯೂ ನಾವು ಕಬ್ಬು ಬೆಳೆಗಾರರ ಸಮಸ್ಯೆಯ ಬಗ್ಗೆ ಬಹಳಷ್ಟು ವಿಚಾರಗಳನ್ನು ಪ್ರಸ್ತಾಪ ಮಾಡಿದೆವು. ಇಡೀ ರಾಜ್ಯದ ರೈತರು ಬೆಂಗಳೂರಿಗೆ ಬಂದು ನಿನ್ನೆ ಹೋರಾಟವನ್ನೂ ಮಾಡಿದರು. ಕೆಲವೊಂದು ನಿರ್ದಿಷ್ಟವಾದಂಥ ಬೇಡಿಕೆಗಳ ಬಗ್ಗೆ ಸರ್ಕಾರದಿಂದ ಯಾವುದೇ ಒಂದು ಸ್ಪಷ್ಟನೆ ಬರಲಿಲ್ಲ. ಕೇಂದ್ರ ಸರ್ಕಾರ ನಿಗದಿ ಮಾಡಿದ ಎಫ್ಆರ್ಪಿಯನ್ನೂ ಸಹ ಸಕ್ಕರೆ ಕಾರ್ಖಾನೆಗಳ ಮಾಲೀಕರು ಕೊಡಲಿಲ್ಲ. ಅದನ್ನಾದರೂ ಕೊಡಬೇಕಾಗಿತ್ತು. ಇಷ್ಟು ಹೊತ್ತಿಗೆ ಪೇಮೆಂಟ್ ಮಾಡಬೇಕಾಗಿತ್ತು. ಎಫ್ಆರ್ಪಿ ಪ್ರಕಾರ ಕೊಟ್ಟಿಲ್ಲ, 2,100 ಎಂದು ಫಿಕ್ಸ್ ಮಾಡಿದ್ದಾರೆ, 9.5% ಇಳುವರಿ ಬೇಸಿಕ್ ಆಗಿದೆ. ಕೆಲವು ಕಡೆ ಇಳುವರಿ ಜಾಸ್ತಿ ಇರುತ್ತದೆ. ಬಿಜಾಪುರದಲ್ಲಿ ಡಿಫರೆಂಟ್ ಇದೆ, ಬೆಳಗಾವಿಯಲ್ಲಿ ಡಿಫರೆಂಟ್ ಇದೆ. ಆ ಪ್ರಕಾರ ಲೆಕ್ಕಾಚಾರ ಮಾಡಿ ಕಾರ್ಖಾನೆಗಳಿಂದ ವಸೂಲು ಮಾಡುವಂಥ ಕೆಲಸ ಆಗಬೇಕಾಗಿತ್ತು. ಅದೂ ಆಗಲಿಲ್ಲ.

ಅಧ್ಯಕ್ಷರು : ನಾನು ಹೇಳುತ್ತೇನೆ ಕೇಳಿ. ನೀವು ಎತ್ತಿದ ಪ್ರಶ್ನೆ ಸೀಮಿತವಾಗಿತ್ತು. ಸರ್ಕಾರ ಏನು ತೀರ್ಮಾನ ಮಾಡಿದೆ? ಆ ತೀರ್ಮಾನದ ಪ್ರಕಾರ ಸಂಬಂಧಪಟ್ಟವರು ನಡೆದುಕೊಳ್ಳಬೇಕು. ಇಷ್ಟಕ್ಕೆ ಸೀಮಿತವಾಗಿದೆ. Proportionate, ಮತ್ತೊಂದು ವಿಷಯ ಅದರಲ್ಲಿ ಇಲ್ಲ. ಬೆಳಗಾವಿಯಲ್ಲಿ ಏನು ಅನೌನ್ಸ್ ಮಾಡಿದ್ದಾರೆ, ಅದನ್ನು ಇಂಪ್ಲಿಮೆಂಟ್ ಮಾಡುವ ವಿಚಾರವನ್ನು ನೀವು ಪ್ರಸ್ತಾಪ ಮಾಡಿದ್ದೀರಿ. ನೀವು ಅಷ್ಟಕ್ಕೇ ಸೀಮಿತ ಮಾಡಿಕೊಳ್ಳಿ.